ಮೂಲ ದಾವಾ ಸಂಖ್ಯೆ. 132/2016 ಪಿ ಡಬ್ಲ್ಯೂ 1

(ದಿನಾಂಕ 31-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ಈ ದಾವೆಯಲ್ಲಿ ನೀವು ಪ್ರತಿವಾದಿಯ ವಿರುದ್ಧ ಏನು ಪರಿಹಾರ ಕೇಳಿದ್ದೀರಿ ಎಂದರೆ ಸಾಕ್ಷಿಯು ಪ್ರತಿವಾದಿಯು ಕಿಟಕಿ ಇಡುವುದಿದ್ದರೆ 3 ಅಡಿ ಜಾಗ ಬಿಟ್ಟು ಇಡಬೇಕು ಅಂತಾ ಕೇಳಿದ್ದೇನೆ. ಸದರಿ ಪರಿಹಾರ ಬಿಟ್ಟು ಬೇರ್ಯಾವುದೇ ಪರಿಹಾರ ಕೇಳಿಲ್ಲ. ಪ್ರತಿವಾದಿಯು ಅವರ ಜಾಗದಲ್ಲಿ ಕಟ್ಟಡ ಕಟ್ಟುವಾಗ ನಾನು ಪುರಸಭೆಯವರಿಗೆ ನಾನು ತಕರಾರು ನೀಡಿದ್ದೆ ಎಂದರೆ ಸರಿ. ನಮ್ಮ ಮನೆ ಕಡೆ ಪ್ರತಿವಾದಿಯರು ತಮ್ಮ ಮನೆಗೆ ಕಿಟಕಿ, ವಾತಾಯನ ಇತರೆ ಯಾವುದನ್ನು ಇಡದಂತೆ ನಿರ್ದೇಶನ ನೀಡಿ ಕಟ್ಟಡ ಪರವಾನಿಗೆ ಕೊಡಬೇಕಂತ ವಿನಂತಿಸಿಕೊಂಡು ಪುರಸಭೆ ಅರ್ಜಿ ನೀಡಿದ್ದೆ ಎಂದರೆ ಸರಿ. ಯಾವುದೇ ಮನೆಗೆ ಕಿಟಕಿ ಮತ್ತು ವಾತಾಯನ ಇಡಲೇಬೇಕು ಎಂದರೆ ಸರಿ. ನಿಪಿ-30 ಪೋಟೋವನ್ನು ಸಾಕ್ಷಿಗೆ ತೋರಿಸಿ ಸದರಿ ಪೋಟೋದಲ್ಲಿರುವ ಹಾಗೆ ಪ್ರತಿವಾದಿಯರು ನಮ್ಮ ಮನೆಯ ಕಾಂಪೌಂಡಿನಿಂದ 3 ಅಡಿ ಜಾಗವನ್ನು ಬಿಟ್ಟು ಮನೆ ಕಟ್ಟಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯು 3 ಅಡಿ ಜಾಗವನ್ನು ಬಿಟ್ಟು ಕಟ್ಟಡ ಕಟ್ಟಿದ್ದರೂ ಸಹಾ ಜಾಗ ಬಿಟ್ಟಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಸೇರಿದ ಆಸ್ತಿಯ ವಿಸ್ತೀರ್ಣಕ್ಕಿಂತ ಹೆಚ್ಚಿಗೆ ವಿಸ್ತೀರ್ಣದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ಇರುವ ಚರಂಡಿ ಮತ್ತು ಚರಂಡಿ ದಾಟಿ ರಸ್ತೆಯ ಸಮೇತ ಒಟ್ಟು 5 ಅಡಿ ಜಾಗವನ್ನು ಅತಿಕ್ರಮಣ ಮಾಡಿ ಮನೆ ಕಟ್ಟಿಕೊಂಡಿರುತ್ತೇವೆಂದರೆ ಸುಳ್ಳು ನಾನು ಮನೆಯನ್ನು ರೋಡನ್ನು ಅತಿಕ್ರಮಣ ಮಾಡಿ ಕಟ್ಟಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತದೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಿಪಿ-21 ರ ಹಾತ್ ನಕಾಶೆಯಲ್ಲಿ ನನ್ನ ಪ್ಲಾಟನ್ನು 80 ಅಂತಾ ತೋರಿಸಿರುತ್ತೇನೆಂದರೆ ಸರಿ. ನನ್ನ ಪ್ಲಾಟಿನ ದಕ್ಷಿಣಕ್ಕೆ ಪ್ಲಾಟ್ ನಂ. 79 ಬರುತ್ತದೆ. ನನ್ನ ಪ್ಲಾಟಿನ ಉತ್ತರ ದಿಕ್ಕಿಗೆ ಪ್ಲಾಟ್ ನಂ. 81 ಬರುತ್ತದೆಂದರೆ ಸರಿ. ಸದರಿ ಪ್ಲಾಟ್ ನಂ.81 ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಪ್ಲಾಟ್ ನಂ. 79 ಮತ್ತು ಪ್ಲಾಟ್ ನಂ. 80 ರ ಮಧ್ಯೆ ಹುದುವಿನ ಗೋಡೆ ಇದೆ. ಸದರಿ ಹುದುವಿನ ಗೋಡೆ 1 ವರೆ ಅಡಿ ಇದೆ. ಹುದುವಿನ ಗೋಡೆ ನಂತರ 16 ಕಾಲು ಅಡಿ ನಮ್ಮ ಜಾಗದಲ್ಲಿ ನನ್ನ ಬಿಲ್ಡಿಂಗ್ ಇರುತ್ತದೆ. ಸಾಕ್ಷಿ ಮುಂದುವರೆದು ಹುದುವಿನ ಗೋಡೆ ಸೇರಿಸಿ ಒಟ್ಟು 16 ಕಾಲು ಅಡಿ ಜಾಗದಲ್ಲಿ ನನ್ನ ಕಟ್ಟಡ ಇರುತ್ತದೆ. ಹುದುವಿನ ಗೋಡೆ ಸೇರಿಸಿ ಒಟ್ಟು 16 ಕಾಲು ಅಡಿ ನಮ್ಮ ಜಾಗದಲ್ಲಿ ಕಟ್ಟಡ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಮ್ಮ ನಕಾಶೆಯಲ್ಲಿ 4 ಮುಕ್ಕಾಲು ಅಡಿ ಜಾಗ

ಅಂತಾ ತೋರಿಸಿದ್ದು ಅದು ಏನು ಎಂದರೆ ಸಾಕ್ಷಿ ಅದು ಪ್ಯಾಸೇಜ್ ಇರುತ್ತದೆನ್ನುತ್ತಾರೆ. ನಿಮ್ಮ ನಕಾಶೆಯಲ್ಲಿ 3 ಅಡಿ ಜಾಗ ಅಂತಾ ತೋರಿಸಿದ್ದು ಅದು ಏನು ಎಂದರೆ ಸಾಕ್ಷಿಯು ಅದು ಹಳೇ ಮನೆಯ ಪ್ಯಾಸೇಜೆನ್ನುತ್ತಾರೆ. ಸದರಿ 3 ಅಡಿ ಪ್ಯಾಸೇಜ್ ಪ್ರತಿವಾದಿಗೆ ಸೇರಿದ್ದು ಇರುತ್ತದೆ. ನೀವು ಹಾಜರುಪಡಿಸಿದ ನಕಾಶೆಯಂತೆ ನೀವು ತೋರಿಸಿರುವ ನಿಮ್ಮ ಆಸ್ತಿಯ ವಿಸ್ತೀರ್ಣ 22 ಅಡಿ ಆಗುತ್ತದೆಂದರೆ ಸರಿಯಲ್ಲ. ನಾನು ಸದರಿ 1 ಅಡಿ ಹೆಚ್ಚುವರಿ ಜಾಗವನ್ನು ಪ್ರತಿವಾದಿಯ ಆಸ್ತಿಯಲ್ಲಿ ಅತಿಕ್ರಮಣ ಮಾಡಿಕೊಂಡು ಕಾಂಪೌಂಡ್ ಕಟ್ಟಿಕೊಂಡಿರುತ್ತೀರಿ ಎಂದರೆ ಸುಳ್ಳು ಪ್ರತಿವಾದಿಯರಿಗೆ ನಾನು ತೊಂದರೆ ಕೊಟ್ಟಿದ್ದರಿಂದ ಅವರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಓ ಎಸ್ ನಂ. 122/2016 ನೇ ದಾವೆಯನ್ನು ದಾಖಲಿಸಿದ್ದರಿಂದ ಅದಕ್ಕೆ ಪ್ರತಿಯಾಗಿ ನಾನು ಅವರ ವಿರುದ್ಧ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ಸದರಿ ಓ ಎಸ್ ನಂ. 122/2016 ರ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯರು ಕಾಂಪೌಂಡ್ ನಮ್ಮ ಜಾಗದಲ್ಲಿ ಕಟ್ಟಿದ್ದು ಇದೆ ಅದನ್ನು ಒಡೆಯಬೇಕೆಂದು ಕೇಳಿರುತ್ತಾರೆ. ನಾನು ಪ್ರತಿವಾದಿಯರಿಗೆ ತೊಂದರೆ ಕೊಟ್ಟಿದ್ದರಿಂದ ಪ್ರತಿವಾದಿಯರು ಓ ಎಸ್ ನಂ. 122/2016 ರಲ್ಲಿ ತಡೆಯಾಜ್ಞೆ ಪಡೆದಿದ್ದಾರೆಂದರೆ ಸಾಕ್ಷಿಯು ಅವರು ತಡೆಯಾಜ್ಞೆ ಪಡೆದಿದ್ದಾರೆ ಆದರೆ ನಾನು ಅವರಿಗೆ ಯಾವುದೇ ತೊಂದರೆಯನ್ನು ಕೊಟ್ಟಿರುವುದಿಲ್ಲವೆನ್ನುತ್ತಾರೆ. ಪ್ರಸ್ತುತ ದಾವೆಯಲ್ಲಿ ನಾನು ಪ್ರತಿವಾದಿಯರ ವಿರುದ್ಧ ನಾನು ಮಧ್ಯಂತರ ತಡೆಯಾಜ್ಞೆ ಕೇಳಿದ್ದು ಅದು ವಜಾ ಆಗಿರುತ್ತದೆಂದರೆ ಸರಿಯಲ್ಲ. ಸದರಿ ತಡೆಯಾಜ್ಞೆ ಬೇಡಿ ಸಲ್ಲಿಸಿದ ಅರ್ಜಿಯು ವಜಾ ಆಗಿದ್ದರೂ ವಜಾ ಆಗಿಲ್ಲಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಜಾಗದಲ್ಲಿ ಕಲ್ಲು, ಮಣ್ಣು ಹಾಕಿ ತಮ್ಮ ಮನೆಗೆ ಕಿಟಕಿಯನ್ನು ಕೂಡಿಸುತ್ತಿದ್ದಾರೆ ಅಂತಾ ಹೇಳಿ ಸುಳ್ಳು ಅರ್ಜಿಗಳನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ತೊಂದರೆ ಕೊಡದಿದ್ದರೂ ಸಹಾ ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ದಾಖಲಿಸಿ ಅದಕ್ಕನುಗುಣವಾಗಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ